Regd No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 31 ಸಂಚಿಕೆ 41] ಗುರುವಾರ 20—11—47 [ಬಿಡಿ ಪ್ರತಿ 3 ಪೈ

ನೆಹರು ಸರ್ಕಾರ ಉರುಳಿಸುವ ಪ್ರಯತ್ನ ?

ಪಾಟಿಯಾಲ ರಾಜರನ್ನು ತರಲು ಒಳಸಂಚು !

ಮುಖ್ಯ ವಾರ್ತೆಗಳು

ನಾರ್ಕಿಂಗ್ ನ 18— ಫರ್ಮೋಸಾ ನೆರೆಹಾವಳಿಯಿಂದ 32 ಸಾವಿರ ಮಂದಿ ಮನೆಮಠವಿಲ್ಲದಂತಾದರು.

ಂ ಂ

ಹೈದರಾಬಾದು ನ 18 — ಸಿಕಂದರಾಬಾದಿನಲ್ಲಿ ಗೂಂಡಾಗಳ ಹಾವಳಿ ವಿಪರೀತವಾಗಿದ್ದು ಈ ಹಾವಳಿ ತಪ್ಪಿಸಬೇಕೆಂದು ಸಾರ್ವಜನಿಕರು ನೈಜಾಮರಲ್ಲಿ ಮನವಿ ಮಾಡಿದ್ದಾರೆ

ಂ ಂ

ಶ್ರೀ ರಾಜೇಂದ್ರ ಪ್ರಸಾದರು ಕಾಂಗ್ರೆಸ್ ಪ್ರೆಸಿಡೆಂಟರಾದರು. ಕೇಂದ್ರ ಸರಕಾರದಲ್ಲಿ ಮಂತ್ರಿ ಪದವಿ ಬಿಡುತ್ತಾರೆ. ಆದರೆ ರಾಜ್ಯಾಂಗ ಸಭಾ ಅಧ್ಯಕ್ಷತೆಯನ್ನು ಹೊಂದಿರುತ್ತಾರೆ.

ಂ ಂ

ತಿರುವೂರು ನ 17 — ನೂಲು ಸಂಘದವರು ಮತ್ತು ಸರಕಾರದವರು ನಡೆಸುತ್ತಿರುವ ಖಾದಿ ಕೇಂದ್ರದಲ್ಲಿ ಈ ವಾರದೊಳಗೆ ತಮಗೆ ಕೆಲಸ ಒದಗಿಸದಿದ್ದಲ್ಲಿ ತಾವು ಸತ್ಯಾಗ್ರಹ ಹೂಡುವುದಾಗಿ 3 ಸಾವಿರ ನೆಯ್ಗೆಯವರು ತಿಳಿಸಿಬಿಟ್ಟಿರುವರು.

ಂ ಂ

ಬಳ್ಳಾರಿಯಲ್ಲಿ ಉದ್ಯೋಗವನ್ನು ಕೊಡುವ ಆಶೆ ತೋರಿಸಿ ಒಬ್ಬ ಕ್ರೈಸ್ತ ಉಪಾಧ್ಯಾಯನನ್ನು ಮುಸ್ಲಿಂ ಮತಕ್ಕೆ ಸೇರಿಸಿಕೊಂಡಿದ್ದು.

ಂ ಂ

ಪಾಟ್ನಾ ವಿಶ್ವವಿದ್ಯಾಲಯದವರು ಶ್ರೀ ರಾಜೇಂದ್ರ ಪ್ರಸಾದ್. ಅಬ್ದುಲ್ ಕಲಾಂ ಆಜಾದರಿಗೆ ಡಾಕ್ಟರ್ ಆಫ್ ಲಿಟರೇಚರ್ ಪಟ್ಟವನ್ನು ಕೊಡಲು ನಿರ್ಧರಿಸಿರುವರು. ಬೀಹಾರು ಮುಖ್ಯ ಮಂತ್ರಿ ಸಿಂಹಾರವರಿಗೂ, ಆರ್ಥಿಕ ಮಂತ್ರಿ ಅನುಗ್ರಹ ನಾರಾಯಣ ಸಿಂಹರಿಗೂ, ಮಾಜಿ ಉಪಾಧ್ಯಕ್ಷರಾದ ಸಚ್ಚಿದಾನಂದ ಸಿಂಹರಿಗೂ ದಾಕ್ಟರ್ ಆಫ್ ಲಿಟರೇಚರ್ ಬಿರುದನ್ನು ಕೊಡಲೆಳಿಸಿರುವರು.

ಪಿತೂರಿ

ಕಡಪಾ ಡಿಸ್ಟ್ರಿಕ್ಟ್ ಕಮ್ಯೂನಿಸ್ಟ್ ಮಹಾಜಭೆಯಲ್ಲಿ ಕಾಂಗ್ರೇಡು ಟಿ. ಕೆ. ರಾಮಸ್ವಾಮಿಯವರು ಹೀಗೆ ಹೇಳಿದರು— ದೇಶದಲ್ಲಿ ನಡೆಯುತ್ತಿರುವ ಮತ ಕಲಹಗಳಿಗೆ ಕಾರಣರು ಬ್ರಿಟಿಷರು, ಅವರ ಬೆಂಬಲವುಳ್ಳ ಸಂಸ್ಥಾನಾಧೀಶರು ಜವಾಬ್ದಾರರು. ಪಂಡಿತ ನೆಹರೂರವರ ಸ್ಥಾನದಲ್ಲಿ ಪಾಟಿಯಾಲಾ ಮಹಾರಾಜರನ್ನು ದೆಹಲಿ ಗದ್ದುಗೆ ಮೇಲೆ ಏರಿಸಲು ತಂತ್ರಗಳು ನಡೆಯುತ್ತಿವೆ ಮತ್ತೊಂದು ಕಡೆ ಕಾಶ್ಮೀರದಲ್ಲಿ ಮತ ಪ್ರಭುತ್ವವನ್ನು ಏರ್ಪಡಿಸಲು ಪಾಕೀಸ್ತಾನ ಯುದ್ಧಗಳಿಸ್ಥಿತಿಗಳನ್ನು ಏರ್ಪಡಿಸುತ್ತಿದೆ. ಈ ಪರಿಸ್ಥಿತಿಯಲ್ಲಿ ದೇಶದಲ್ಲಿ ಶಾಂತಿಯನ್ನು ನೆಲೆಗೊಳಿಸಿ ರಾಷ್ಟ್ರೀಯ ಸರಕಾರವನ್ನು ಬಲಗೊಳಿಸಬೇಕೆಂದಿರುವ ಬಾಧ್ಯತೆಯು ಜನಗಳ ಮೇಲಿದೆ. [ಜ್ವಾ

ನೈಜಾಮರ ಭೂತ್ವತನವನ್ನು ಣಗಿಸಲು ಸತಾರಾದಲ್ಲಿ 1942 ರಲ್ಲಿ ಪ್ರತಿ ಸರಕಾರವನ್ನು ಏರ್ಪಡಿಸಿದ್ದವರು. ಸರ್ಕಾರವು ತಮ್ಮ ಸಹಾಯವನ್ನು ಕೋರಿದಲ್ಲಿ ಸಿದ್ಧವಾಗಿರುವುದಾಗಿ ತಿಳಿಸಿದ್ದಾರೆ.

ಂ ಂ

ನವದೆಹಲಿ ಪ್ರಾರ್ಥನಾ ಸಭೆಯಲ್ಲಿ ಗಾಂಧೀಜಿ ಮಾಡಿದ ಭಾಷಣದಲ್ಲಿ ಸಿಕ್ ಮತ್ತು ಹಿಂದು ಕರ್ತವ್ಯ ಬಗ್ಗೆ ನುಡಿಯುತ್ತ ಪಾಕೀಸ್ತಾನಕ್ಕೆ ನಿರ್ಗಮಿಸಿದುವ ಮುಸ್ಲಿಂರು ಮತ್ತೆ ಭಾರತಕ್ಕೆ ಆಗಮಿಸಲಿ ಎಂದರು.

ಂ ಂ

ಕಾಶ್ಮೀರದಲ್ಲಿ ಕೋಮುವಾರು ಕೂಟಗಳಿರುವುದನ್ನು ಸಹಿಸಲು ಅಸಾಧ್ಯವೆಂದು ಷೇಕ್ ಅಬ್ದುಲ್ಲ ಹೇಳಿದ್ದಾರೆ.

ಂ ಂ

ತುಮಕೂರಿನ ಹೈಸ್ಕೂಲ್ ವಿದ್ಯಾರ್ಥಿಗಳ ಮುಷ್ಕರ ನಿನ್ನೆಯಿಂದ ಶಾಂತಿತ್ವಂದೇಮಾತರಂ ಹಾಡುವಂತೆಯೇ ಟಾಗೂರರ ಮತ್ತು ಇಕ್ಬಾಲರ ಗೀತೆಗಳನ್ನು ಹಾಡಬೇಕೆಂದು ಒಪ್ಪಿಕೊಡವಾಯಿತು.

ಅಕಳ ಕೊಂದ ಪಾಪ ಅರು ತಿಂಗಳಲ್ಲಿ ಕಾಣುವುದು-

ನೋಟಾರು ಕೆಲಸಗಾರರ ಸಂಘ

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘವು ರಜಿಸ್ಟರಾಯಿತು. ತಾ || 28 ಶುಕ್ರವಾರ ರಾತ್ರೆ 8 ಗಂಟೆಗೆ ಸಯ್ಯಾಜಿರಾವ ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಯಲ್ಲಿ ಶ್ರೀ ದೌಲತ್ ರಾವ್ ರವರ ಅಧ್ಯಕ್ಷತೆಯಲ್ಲಿ ಸಭೆ ಸೇರುತ್ತೆ. ಕೆಲಸಗಾರರೆಲ್ಲರೂ ಬರಬೇಕು ಎಂದು ಕಾರ್ಯದರ್ಶಿ ಶ್ರೀ ಸುಬ್ಬಣ್ಣ ನವರು ವಿನಂತಿ ಮಾಡಿಕೊಂಡಿದ್ದಾರೆ.

ಕಲ್ಕತ್ತ ಮ್ಯೂಜಿಯಂ

ಕಲ್ಕತ್ತಾದ ಚೌರಂಗಿಯಲ್ಲಿರುವ ಪ್ರಸಿದ್ಧ ಕಲ್ಕತ್ತಾ ವ್ಯಾಸಿಯವನ್ನು ಇದೀಗ ತೆರೆಯಲಾಗಿದೆ. ಕಳೆದ ಆರು ವರ್ಷಗಳಿಂದ ಇದು ಮುಚ್ಚಲ್ಪಟ್ಟಿತ್ತು. ಪೌರ್ವಾತ್ಯ ದೇಶದಲ್ಲಿ ಅತಿ ಪ್ರಸಿದ್ಧ ವಸ್ತು ಸಂಗ್ರಹಾಲಯವಿದು.

ಬರ್ಮಾದಲ್ಲಿ ಆನೆಗಳ ಕ್ಷಾಮ

ಆನೆಗಳಿಗೆ ಹೆಸರು ಹೋದ ಬರ್ಮಾ ದೇಶದಲ್ಲಿ ಈಗ ಅವುಗಳ ಬರಗಾಲ ಉಂಟಾಗಿದೆ ಆನೆಗಳಿಲ್ಲದೆ ಮರ ಮಟ್ಟು ಸಾಗಿಸುವ ಕಾರ್ಯ ಮುಂದುವರಿಯುವುದಿಲ್ಲ ಜಪಾನ್ ಆಕ್ರಮಣ ಕಾಲದಲ್ಲಿ ಹತ್ತು ಆನೆಗಳನ್ನು ಜಪಾನರು ಗುಂಡಿಟ್ಟು ಕೊಂದಿದ್ದರು. ಆ ಬೆದರಿಕೆಯಿಂದಲೇ ಹಲವು ಆನೆಗಳು ಒಡ್ಡಾ ಕಾಡನ್ನು ಬಿಟ್ಟು ಓಡಿದ್ದವು; ಮತ್ತೆ ಮರಳಲಿಲ್ಲ.

ಪೆನ್ಷನ್ನಿಗಾಗಿ

ಜಪಾನಿನ ರಾಜಮನೆತನದ ಸದಸ್ಯರಿಗೆ ಪೆನ್ಷನ್ ಕೊಡುವ ಬಗ್ಗೆ ವರ್ಷಕ್ಕೆ 750 ಸಾವಿರ ಪೌನುಗಳಿಂತ ಹೆಚ್ಚು ಮೊಬಲಗನ್ನು ಆ ಸರಕಾರ ಖರ್ಚು ಮಾಡುತ್ತಿದೆ

ಸುದ್ದಿಗಳು

ಲಂಡನ್ ನ 18 — ರಾಜಕುಮಾರಿ ಎಲಿಜಬತ್‌ರಿಗೆ ಬಂದಿರುವ ವಿವಾಹ ಉಡುಗೆರೆಗಳಲ್ಲಿ ಒಂದು ಕಾರ್ ಇದೆ.

ಪ್ಯಾರಿಸ್, ನ 19 — ಫ್ರಾನ್ಸಿನಲ್ಲಿ 5 ಲಕ್ಷ ಮಂದಿ ಭಾಗವಹಿಸಿರುವ ಮಹಾ ಮುಷ್ಕರವಾರಂಭವಾಗಿದೆ.

ಬೆಂಗಳೂರಿನಲ್ಲಿ ನಡೆಯುವ ಪ್ರತಿನಿಧಿ ಸಭೆ ಮಧ್ಯಾಹ್ನ 2 ಗಂಟೆಯಿಂದ ಸಂಜೆ 7 ಗಂಟೆ ವರೆಗೆ ನಡೆಯುವುದೆಂದು ತಿಳಿಯಬಂದಿದೆ.

ನವದೆಹಲಿ, ನ 19 — ಹೈದರಾಬಾದಿನ ಒಗ್ಗೆ 28 ನೇ ತಾರೀಖು ದಿನವೇ ಕಡೆಯಂತೆಂದು ಪಟೇಲ್ ಹೇಳಿದ್ದಾರೆ.

ಸಾಂಗ್ಲಿ ನ 18 — ಗಾಂಧೀಜೀ ನಿಜವಾದ ಬ್ರಾಹ್ಮಣನೆಂಬ ಉದಾಹರಣೆ ತೋರಿಸಿರುವರೆಂದು ಬ್ರಾಹ್ಮಣ ಸಭೆಯ ಡ್ರೆ ಇಚಲ್ ಕಾಂಜಿ ರಾಜರು ಅಧ್ಯಕ್ಷ ಭಾಷಣದಲ್ಲಿ ತಿಳಿಸಿದರು.

ಫ್ಲಷಿಂಗ್ ನ 19— ದೊಡ್ಡ 5 ರಾಷ್ಟ್ರಗಳ ವೀಟೋ ಅಧಿಕಾರದ ವಿಷಯದಲ್ಲಿ ಯಾವುದೇ ಚರ್ಚೆಗೆ ಕೈಪಾಕಿದರೂ ಎಲ್ಲರಿಗೂ ಅನಾಯವೆಂದು ರಷ್ಯಾ ಪ್ರತಿನಿಧಿ ಹೇಳಿಬಿಟ್ಟಿದಾನೆ.

ಕೊಡಗಿನಲ್ಲಿ ಲಕ್ಷ್ಮಣತೀರ್ಥ ಮತ್ತು ಹಾರಂಗೀ ನದಿಗಳಿಗೆ ಅಣೆಕಟ್ಟು ನಿರ್ಮಿಸಲು ಯೋಜನೆ ತಯಾರಾಗಿರುವುದೆಂದು ತಿಳಿಯಬಂದಿದೆ.

Woodlands

Morning Shows at 10-30

From 21—11—47 For 4 days

Salty O'Rouke

— starring —

Allan Ladd — Gail Russell

"ಪ್ರಜಾಮಂಡಲ"

ಕಾಂಗ್ರೆಸ್ಸಿನ – ಸರ್ಕಾರದ – ಧರ್ಮಗಳ ಮತ್ತು

ಸರ್ವಧರ್ಮಾಯರ ಹಿತಚಿಂತನಾರ್ಥ ಏಕೀಕರಣದ ಒಗ್ಗೆ

ಮುಂದಿನ ಶಾಂತಿಯುತರಾಜ್ಯಭಾರಬಗ್ಗೆ ಪ್ರಜೆಗಳಲ್ಲಿ ಅಲ್ಪಸಂಖ್ಯಾತರಾಗಿರುವ ಸತ್ಯ ನ್ಯಾಯ ಧರ್ಮಗಳ ಮತ್ತು ಅಹಿಂಸಾ ಜೀವನ ಜವಾಬ್ದಾರಿ ಸರಕಾರದ ನಿರ್ಮಾಣದ ಬಗ್ಗೆ ಪ್ರಜೆಗಳು ಸಹಕರಿಸಲು ಬೇಕಾದ ಕಾರ್ಯಕ್ರಮಗಳನ್ನು ಪ್ರಜೆಗಳು ಅನುಮೋದಿಸಿ, ಸರ್ಕಾರದ ಪರ ಮತ್ತು ಕಾಂಗ್ರೆಸ್ಸಿನವರ ಕಾರ್ಯಕ್ರಮಗಳನ್ನು ಪರಿಶೋಧಿಸಿ ಶಾಂತಿ ಸ್ಥಾಪನೆ ಮಾಡಲು ದೇವೀದಾಸ ಗೋಪಾಲ ಸುಬ್ರಹ್ಮಣ್ಯಂರವರು ದೊಡ್ಡ ಕೆರೆ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಸರ್ವರನ್ನೂ ಸ್ವಾಗತಿಸಿದ್ದಾರೆ.

At Opera From 20–11–47

ಮೂಲಿತಿ — ಶಿವಭಾಗ್ಯಂ
ಎಸ್. ವಿ. ಸುಬ್ಬಯ್ಯ — ಸಂಬಯಾರ್
ಪಾತ್ರವಹಿಸಿರುವ

ಕಂಜನ್

ತಮಿಳು ಚಿತ್ರ — ಇದರ ಜೊತೆಯಲ್ಲಿ ಶೊಯಮತ್ತೂರಿನಲ್ಲಿ ಸ್ವತಂತ್ರ ದಿನಾಚರಣೆ ವತ್ತು ಮಹಾತ್ಮಾ ಗಾರಧಿಯವರ ಪಳನಿ ಯಾತ್ರೆ ಫಲಿಂ ಸಹ ತೋರಿಸಲಾಗುತ್ತೆ.

3 ನೇ ಯುದ್ಧಕ್ಕೆ

ಇವು ಕಾರಣಗಳಾಗಲಾರವೆ ?

1 ಫ್ರಾನ್ಸಿನ ಮುನಿಸಿಪಲ್ ಚುನಾವಣೆಗಳಲ್ಲಿ ಡಿಗಾಲು ಪಕ್ಷದವರು ಗೆದ್ದಿರುವಿಕೆ.

2 ಐರ್ಲಿಂಡಿನಲ್ಲಿ ಡಿವೆಲರಾ ಪಕ್ಷವು ಸೋತಿರುವಿಕೆ.

3 ಇಂಗ್ಲೆಂಡಿನ ಮುನಿಸಿಪಲ್ ಚುನಾವಣೆಯಲ್ಲಿ ಕ್ಯಾಸರ್ವೆಟಿವ್ ಪಂಗಡ ಗೆದ್ದಿರುವಿಕೆ.

4 ಹೈದರಾಬಾದು ರಾಯಭಾರಕ್ಕೆ ಕೊನೆಯಿಲ್ಲದಿರುವಿಕೆ.

Woodlands

ಯಶಸ್ವಿ 3 ನೇ ವಾರ

ಅಶೋಕಕುಮಾರ್

ವೀರಾ, ಪ್ಯಾರೊ, ಪಾತ್ರವಹಿಸಿರುವ

ಪಿ ಪಿಕಾರಿ ರಿ

(ಅನೋಫ ಹಿಂದಿ ಚಿತ್ರ)

Save the Cow

ಗೋ ವಧೆ ನಿಲ್ಲಲಿ

Edited, Printed and Publishd by M S Krishna Rao at the Satyavadi Press Chamaraja Agahar Myrsore.

ವಿಟೋಫೆರಿನ್

ಟ್ರೇಡ್ ITL ಮಾರ್ಕ್

ಎ. ಬಿ. ಡಿ. ವಿಟಮಿನ್ನುಗಳು ಮತ್ತು ದೇಹಪೋಷಣೆಗೆ ಬೇಕಾದ ಮುಖ್ಯ ಖನಿಜಗಳು. ಭಟ್ಟಿ ಇಳಿಸಿದಂತಾಗಿ ಮತ್ತು ಜೀನುತುಪ್ಪ ಇವುಗಳನ್ನೊಳಗೊಂಡು ತಯಾರಿಸಲ್ಪಟ್ಟ ಟಾನಿಕ್ ಔಷಧಿ ವಿಟೋಫೆರಿನ್ ಸೇವನೆಯಿಂದ ಮಕ್ಕಳ ಬೆಳವಣಿಗೆಗೂ, ಕಾಯಿಲೆಯಿಂದ ಎದ್ದು ಗುಣಮುಖರಾಗುತ್ತಿರುವವರಿಗೂ, ಗರ್ಭಿಣಿ ವತ್ತು ಬಾಣಂತಿಯರ ಪೋಷಣೆಗೂ ಅನುಕೂಲವಾದುದು.

"ವಿಟೋಫೆರಿನ್" ಜಾಯಿಲೆ ಒರದಂತೆ ನೋಡಿಕೊಳ್ಳುವ ಮನೆಯ ಕಾವಲುಗಾರ.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd..

Malleswaram P. O. Bangalore

ಮೈಸೂರು ಸಿಟಿ ರೇಷನಿಂಗ್ ಆಫೀಸ್

ನಂ. ಸಿ ಇ ಡಿ 259 / 47–48 ತಾ|| 7–11–1947

ನೋಟೀಸು

ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—

ಸುಮಾರು 89893 ಹಳೇ ಮತ್ತು ಅನುಪಯುಕ್ತವಾದ ಗೋಣೀಚೀಲಗಳು ನಗರದ ಕೆಲವು ಸರಕಾರಿ ಗೋಡ್ವೌನ್‌ಗಳಲ್ಲಿ ಶೇಖರವಾಗಿವೆ. ಅವುಗಳನ್ನು ತಾ|| 8—12—47 ರಿಂದ ಈ ಕೆಳಗೆ ಕಂಡ ಷರತ್ತುಗಳ ಮೇಲೆ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

1 ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರೆಲ್ಲರೂ ರೂ. 50 ಠೇವಣಿ ಇಡಬೇಕು. ಹರಾಜು ಮುಗಿದನಂತರ ಈ ಠೇವಣಿ ವಾಪಸ್ಮಾಡಲಾಗುವುದು.

2 ಹರಾಜಿನಲ್ಲಿ ಕೊನೆಯ ಬಿಡ್ ಮಾಡಿದವರು ಹರಾಜು ಮುಗಿದ ಕೂಡಲೇ ಬಿಕರಿ ಹಣದಲ್ಲಿ ಶೇಕಡಾ 25 ರಷ್ಟು ಹಣವನ್ನು ಅಲ್ಲೇ ಠೇವಣಿ ಇಡಬೇಕು. ಮತ್ತು ಉಳಿದ ಹಣವನ್ನು ಬಿಕರಿಯ ನಿಶ್ಚಯತ್ವವನ್ನು ಅವರಿಗೆ ತಿಳಿಸಿದ ಮೂರು ದಿನಗಳಲ್ಲಿ ಸಲ್ಲಿಸತಕ್ಕದ್ದು. ಹಾಗೆ ಮಾಡದಿದ್ದಲ್ಲಿ ಠೇವಣಿ ಇಟ್ಟ ಹಣವನ್ನು ಸರ್ಕಾರವು ಜಪ್ತಿಮಾಡಿಕೊಂಡು ಚೀಲಗಳನ್ನು ಮತ್ತೆ ಮೂರಾಟ ಮಾಡಲಾದೀತು. ಇದರ ಜವಾಬ್ದಾರಿಯು ಠೇವಣಿಕಾರರ ಮೇಲೆ ಇದ್ದು ಇದರಲ್ಲಿ ಸರಕಾರಕ್ಕೆ ನಷ್ಟವಾಗುವುದಾದರೆ ಅದರ ಜವಾಬ್ದಾರಿಯೂ ಇವರ ಮೇಲೆ ಇರುವುದು. ಲಾಭವಾದರೆ ಇವರಿಗೆ ಅದರಲ್ಲಿ ಭಾಗವಿರಲಾರದು.

3 ನಗರದ ರೇಷನಿಂಗ್ ಆಫೀಸರ್ ಕಡೆಯಿಂದಾಗಲಿ ಅಥವಾ ಅವರ ಅಸಿಸ್ಟೆಂಟರ ಕಡೆಯಿಂದಾಗಲಿ ಹರಾಜಿನೆ ಕಾರ್ಯರೂಪಗಳು ನಡೆಯುವವು. ಮತ್ತು ಇದರ ಕೊನೆ ತೀರ್ಮಾನವನ್ನು ಬೆಂಗಳೂರಿನಲ್ಲಿರುವ ಮೈಸೂರು ಫುಡ್ ಸಪ್ಲೈಸ್ ಡೈರೆಕ್ಟರವರಿಂದ ಮಾಡಲಾಗುವುದು. ಇವರಿಗೆ ಹರಾಜು ಒಪ್ಪುವ ಅಥವಾ ಬಿಡುವ ಅಧಿಕಾರವೂ ಉಂಟು ಅದಕ್ಕೆ ಕಾರಣವನ್ನು ಕೇಳುವ ಅಧಿಕಾರವು ಯಾರಿಗೂ ಇರಲಾರದು. ಒಂದು ವೇಳೆ ಹರಾಜು ಒಪ್ಪಿತವಾಗದಿದ್ದಲ್ಲಿ ಬಿಡ್ದಾರಿಗೆ ಯಾವ ಪ್ರತಿಫಲವೂ ದೊರೆಯಲಾರದು.

4 ಮೇಲೆ 1 ನೇ ಕಲಮಿನಲ್ಲಿ ಸಮೂದಿಸಿರುವ ಷರತ್ತಿಗನುಗುಣವಾಗಿ ಕೊನೆಯ ಬಿಡ್ದಾರು ಹರಾಜಿನ ಪೂರ್ಣ ಹಣವನ್ನು ಸಲ್ಲಿಸಿದ ನಂತರವೇ ಮಾಲು ತೆಗೆದುಗೊಂಡು ಹೋಗಲು ಅರ್ಹನಾಗುವನು.

5 ಬಿಡ್ದಾರುಗಳು ಕೆಲಸದ ದಿನಗಳಲ್ಲಿ ಸಾಯಂಕಾಲ 3 ರಿಂದ 5 ಘಂಟೆ ವರೆಗೆ ಆಯಾ ಡಿಪೋಗಳಲ್ಲಿ ಚೀಲಗಳನ್ನು ನೋಡಬಹುದು.

6 ಹರಾಜು ಮುಗಿದ್ದನ್ನು ಹೇಳಿದನಂತರ ಖರೀದಿ ಮಾಡಿದವರು 1 ದಿನಗಳಲ್ಲಿ ಪೂರ್ತಿ ಹಣ ಸಲ್ಲಿಸಿ ಸಾಮಾನು ಸುಫರ್ದಿ ಪಡೆಯಬೇಕು ತಪ್ಪಿದಲ್ಲಿ ಆಗಬಹುದಾದ ಯಾವ ನಷ್ಟಗಳಿಗೂ ಈ ಕಛೇರಿ ಜವಾಬ್ದಾರಿಯಾಗಲಾರದು.

7 ಮಾರಾಟವಾದ ಈ ಚೀಲಗಳ ಸ್ಥಿತಿಗತಿಗಳ ಬಗ್ಗೆಯೂ, ಮತ್ತಾವ ವಿಷಯಕ್ಕೂ ಸರ್ಕಾರವು ಜವಾಬ್ದಾರವಲ್ಲ.

(ಸಹಿ) ಎಂ. ಶ್ರೀನಿವಾಸಲು ನಾಯ್ಡು
ರೇಷನಿಂಗ್ ಆಫೀಸರ್, ಮೈಸೂರು ಸಿಟಿ

SHAKTI SUDHA

A Superb TONIC